ಅ) ಬಂದಿದೆ.

ಆ) ಸರ್ಕಾರದ ವಿವಿಧ ಪ್ರಾಧಿಕಾರದಿಂದ ಮಂಜೂರಾದ ಜಮೀನುಗಳನ್ನು ಅಳತೆ ಮಾಡಿ ದುರಸ್ತಿಪಡಿಸುವಲ್ಲಿ ಆದ್ಯತೆಯ ಮೇರೆಗೆ ಕ್ರಮಕೈಗೊಳ್ಳಲು 2008ನೇ ಸಾಲಿನಲ್ಲಿ ವಿಶೇಷ ಆಂದೋಲನವನ್ನು ರೂಪಿಸಿ ಅದರ ಪ್ರಕಾರ ಆಯಾ ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳ ಎಲ್ಲಾ ಪೋಡಿ ಪ್ರಕರಣಗಳನ್ನು ಕ್ರೋಢೀಕರಿಸಿ ಏಕಕಾಲದಲ್ಲಿ ಇಂತಹ ಗ್ರಾಮದ ಸರ್ವೆ ಕಾರ್ಯಕೈಗೊಳ್ಳುವ ಬಗ್ಗೆ ಸೂಚನೆ ನೀಡಲಾಗಿದೆ.

ಆದರೂ ಈ ಕ್ರಮ ವಿಳಂಬವಾಗುತ್ತಿರುವುದನ್ನು ಗಮನಿಸಿ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಸದರಿ ಆಂಧೋಲನದ ಅಡಿಯಲ್ಲಿ ನಿರ್ವಹಿಸಬೇಕಾದ 1 ರಿಂದ 5ರವರೆಗಿನ ನಮೂನೆಗಳ ವಿವರಗಳನ್ನು ಭರ್ತಿ ಮಾಡುವ ಕಾರ್ಯವನ್ನು ಮುಂದುವರೆಸಿ ಕೇವಲ ಅತಿ ಜರೂರು ಪ್ರಕರಣಗಳೆಂದು ಜಿಲ್ಲಾಧಿಕಾರಿಗಳಿಂದ ಪರಿಗಣಿಸಿದಲ್ಲಿ ಅವರ ಆದೇಶದ ಮೇರೆಗೆ 1 ರಿಂದ 5ರವರೆಗಿನ ನಮೂನೆಯಲ್ಲಿ ಭರ್ತಿ ಮಾಡುವ ಕೆಲಸವನ್ನು ಕಾಯ್ದೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಪೋಡಿ ದುರಸ್ತಿ ಕೆಲಸ ಕೈಗೊಳ್ಳಲು ಸೂಚನೆ ನೀಡಲಾಗಿದೆ. ಇದರಿಂದ ತಕ್ಕಮಟ್ಟಿಗೆ ನೋಂದಣಿ ಅಥವಾ ಅತಿ ಜರೂರಿನ ಪ್ರಕರಣಗಳನ್ನು ಏಕ ಪ್ರಕರಣದ ಅನ್ವಯ ವಿಲೇ ಮಾಡಲಾಗುತ್ತಿದೆ.

ಈ ಕೆಲಸಕ್ಕೆ ಸರ್ಕಾರಿ ಭೂಮಾಪಕರ ಕೊರತೆ ಇದ್ದು, ಹೊಸದಾಗಿ ಸರ್ಕಾರ ಮಂಜೂರು ಮಾಡಿರುವ 1600 ಭೂಮಾಪಕರ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೆಲಸದ ಒತ್ತಡ ಇರುವಲ್ಲಿ ಸಿಬ್ಬಂದಿಗಳನ್ನು ಪ್ರತಿನಿಯೋಜಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

ಹೊಸ ತಾಲ್ಲೂಕು ಮತ್ತು ಸಂಬಂಧಿಸಿದ ಆಫೀಸುಗಳನ್ನು ಪ್ರಾರಂಭಿಸುವುದು

93(360) ಶ್ರೀ ಸಿದ್ದುಸವದಿ (ತೇರದಾಳ್) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಪುನರ್ ವಿಂಗಡಣಾ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸಲಾಗುವುದೇ; ಹಾಗಿದ್ದಲ್ಲಿ, ಯಾವಾಗ ಆದೇಶ ಹೊರಡಿಸಲಾಗುವುದು;

ಆ) ಈ ಸಮಿತಿಯ ವರದಿ ಪ್ರಕಾರ ರಾಜ್ಯದಲ್ಲಿ ಎಷ್ಟು ಹೊಸ ತಾಲ್ಲೂಕುಗಳಾಗುವುವು; ಅವು ಯಾವುವು ಮತ್ತು ವರದಿ ಪ್ರಕಾರ ಎಲ್ಲವೂ ಅರ್ಹ ಇರುತ್ತವೆಯೇ;

ಇ) ಅನ್ಯ ಕಾರಣಗಳಿಂದ ವಿಳಂಬವಾದಲ್ಲಿ ತಾಲ್ಲೂಕು ಮಟ್ಟದ ಕಛೇರಿಗಳನ್ನಾದರೂ ಪ್ರಾರಂಭಿಸಲಾಗುವುದೇ (ಸಂಪೂರ್ಣ ವಿವರ ನೀಡುವುದು)?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವ ಸಂಬಂಧ ಇದುವರೆಗೆ ಒಟ್ಟು ನಾಲ್ಕು ಸಮಿತಿಗಳು ಅಂದರೆ ಶ್ರೀ ಎಂ. ವಾಸುದೇವರಾವ್ ಆಯೋಗ, ಶ್ರೀ ಟಿ.ಎಂ. ಹುಂಡೇಕರ್ ಸಮಿತಿ, ಶ್ರೀ ಪಿ.ಸಿ.ಗದ್ದೀಗೌಡರ್ ಸಮಿತಿ ಮತ್ತು ಶ್ರೀ ಎಂ.ಬಿ. ಪ್ರಕಾಶ್ ಅಧ್ಯಕ್ಷತೆಯ ಸಮಿತಿಗಳನ್ನು ನೇಮಿಸಲಾಗಿತ್ತು.

ಶ್ರೀ ಎಂ.ಬಿ. ಪ್ರಕಾಶ್ ನೇತೃತ್ವದ ಸಮಿತಿಯು ಶಿಫಾರಸ್ಸುಗಳನ್ನು ದಿನಾಂಕ 30–5–2009ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ವರದಿಯು ಪರಿಶೀಲನೆಯಲ್ಲಿದ್ದು ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಿದೆ.

ಆ) ಶ್ರೀ ಎಂ.ಬಿ. ಪ್ರಕಾಶ್ ಸಮಿತಿಯು 43 ಹೊಸ ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತದೆ.

ಸಮಿತಿಯ ಶಿಫಾರಸ್ಸುಗಳ ಮೇಲೆ ಸರ್ಕಾರ ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಿದೆ.

ಇ) ಜನಗಣತಿಯ ಕಾರ್ಯ ಮುಗಿಯುವವರೆಗೆ ತಾಲ್ಲೂಕು ಪುನರ್ ರಚನೆ ಮಾಡಲು ನಿರ್ಬಂಧವಿದ್ದು ಈ ಕಾರ್ಯ ಮುಗಿದ ನಂತರ ಸರ್ಕಾರವು ಅಂತಿಮ ನಿರ್ಣಯ ಕೈಗೊಳ್ಳಲಿದೆ.